**ಅಸಲು ದಾವಾ ನಂ:115/2016**
**ಪಿ.ಡಬ್ಲ್ಯೂ:02**

**ದಿನಾಂಕ: 02-03-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಜಿ ಆರ್ 1 ನೇ ಪ್ರತಿವಾದಿ ಪರ ವಕೀಲರಿಂದ**

ನಾನು 8 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನನ್ನ ತಂದೆ ಪೀರ್ ಸಾಬ್ ಆಗಿದ್ದು ಸದರಿಯವರಿಗೆ ನಾವುಗಳು 5 ಜನ ಮಕ್ಕಳು ಜನಿಸಿರುತ್ತೇವೆ. ಅವರುಗಳೆಂದರೆ ಬುಡೇನ್ ಸಾಬ್, ವಲ್ಲಿಪೀರ್, ಟಿಪ್ಪುಸಾಬ್, ನಾನು ಮತ್ತು ಸನಾವುಲ್ಲಾ ಜನಿಸಿರುತ್ತೇವೆ. ವಾದಿ ಹುಸೇನ್ ಬಿ ಯವರು ನನ್ನ ಸಹೋದರ ವಲ್ಲಿಪೀರ್ ರವರ ಪತ್ನಿ ಎಂದರೆ ಸರಿ. ವಾದಿ ಹುಸೇನ್ ಬಿಯವರು ನನ್ನ ಅತ್ತಿಗೆಯಾಗುತ್ತಾರೆ. ದಾವಾ ಅನುಸೂಚಿ ಸ್ವತ್ತನ್ನು ವೃಷಬೇಂದ್ರಪ್ಪ ಮತ್ತು ಸಿದ್ದಮ್ಮ ರವರ ಕಡೆಯಿಂದ ಕೊಂಡುಕೊಂಡಿರುತ್ತಾರೆ.

ನನ್ನ ಅತ್ತಿಗೆ ವಾದಿ ಹುಸೇನ್ ಬಿಯವರು ಸದರಿ ವೃಷಬೇಂದ್ರಪ್ಪರವರಿಂದ ಖರೀದಿ ಮಾಡಿದ ದಾವಾ ಅನುಸೂಚಿ ಸ್ವತ್ತಿನ ದಿನವೇ 1 ರಿಂದ 4 ನೇ ಪ್ರತಿವಾದಿಯರಾದ ಲೋಕೇಶ, ಕಮಲಮ್ಮ, ನರಸಿಂಹಪ್ಪ ಮತ್ತು ತಿಪ್ಪೇಸ್ವಾಮಿರವರು ಸದರಿ ವೃಷಬೇಂದ್ರಪ್ಪರವರಿಂದ ದಾವಾ ಅನುಸೂಚಿ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸದರಿ ಕೋರಿಕೆಯನ್ನು ಅನುಮತಿಸಲಾಯಿತು ಮತ್ತು ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.